ಸಂಖ್ಯೆ: ಇಎಸ್‌ಟಿ (1)205/2010-11

ಜಿಲ್ಲಾಧಿಕಾರಿಗಳ ಕಛೇರಿ,
ಮಂಡ್ಯ ಜಿಲ್ಲೆ,
ಮಂಡ್ಯ. ದಿನಾಂಕ: 08-08-2011.

# ಪ್ರಕಟಣೆ

ವಿಷಯ:- ಮಂಡ್ಯ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುತ್ತಿರುವ ಬಗ್ಗೆ.

ಉಲ್ಲೇಖ:-(1)ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 299 ಬಿಎಸ್‌ಸಿ 2006 ದಿನಾಂಕ 03-02-2009

(2)ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 299 ಬಿಎಸ್‌ಸಿ 2006 ದಿನಾಂಕ 24-07-2009

(3)ಸರ್ಕಾರದ ಪತ್ರ ಸಂಖ್ಯೆ:ಕಂಇ 04 ಬಿಎಸ್‌ಸಿ 2011 ದಿನಾಂಕ 25-02-2011

(4)ಈ ಕಛೇರಿಯ ಸಮಸಂಖ್ಯೆ ಅಧಿಸೂಚನೆ ದಿನಾಂಕ: 20-4-2011

@@@@@

ಮಂಡ್ಯ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ On line ಮುಖಾಂತರ ಅರ್ಜಿಯನ್ನು ಅಹ್ವಾನಿಸಿ ಉಲ್ಲೇಖಿತ (4)ರ ರೀತ್ಯಾ ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

ತತ್ಸಂಬಂಧ ಆನ್‌ಲೈನ್ ಮುಖಾಂತರ ಬಂದಿರುವ ಅರ್ಜಿಗಳನ್ನು ಉಲ್ಲೇಖ (1) ಮತ್ತು (3)ರ ಸರ್ಕಾರದ ಆದೇಶ ರೀತ್ಯಾ ಮೀಸಲಾತಿ ಅನುಗುಣವಾಗಿ ಅಭ್ಯರ್ಥಿಗಳು ದ್ವಿತೀಯ ಪಿ.ಯು.ಸಿ./ ಸಿ.ಬಿ.ಎಸ್.ಇ/ಐ.ಸಿ.ಎಸ್.ಸಿ ರಲ್ಲಿ ಗಳಿಸಿದ ಗರಿಷ್ಟ ಅಂಕಗಳ (ಮೆರೀಟ್) ಆಧಾರದಲ್ಲಿ 1:5 ಅನುಪಾತದಲ್ಲಿ ಈ ಕೂಡ ಲಗತ್ತಿಸಿರುವ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸಿದೆ. ಸದರಿ ಪಟ್ಟಿಯಲ್ಲಿ 3ಬಿ ವರ್ಗಕ್ಕೆ 2009-10ನೇ ಸಾಲಿನಲ್ಲಿ ರೋಸ್ಟರ್ ಪಾಯಿಂಟ್ 03 (ಗ್ರಾಮೀಣ) ಭರ್ತಿಯಾಗದೆ ಉಳಿದಿದ್ದರಿಂದ ಇದನ್ನು ಮುಂದುವರಿಸಿ, ಸದರಿ ವರ್ಗಕ್ಕೆ 2010-11ನೇ ಸಾಲಿಗೆ ವರ್ಗೀಕರಣದಂತೆ ರೋಸ್ಟರ್ ಪಾಯಿಂಟ್ 04 ಮತ್ತು 05ನ್ನು (04-ಅಂಗವಿಕಲ ಮತ್ತು 05-ಮಹಿಳೆ ರೋಸ್ಟರ್ ಮೀಸಲು) ತೆಗೆದುಕೊಳ್ಳಲಾಗಿದೆ.

ಸದರಿ ತಾತ್ಕಲಿಕ ಪರಿಶೀಲನಾ ಪಟ್ಟಿಗೆ ಅಭ್ಯರ್ಥಿಗಳ ಆಕ್ಷೇಪಣೆಗಳಿದ್ದಲ್ಲಿ, ಅಭ್ಯರ್ಥಿಯ ಹೆಸರು ಮತ್ತು ಅಂಚೆ ವಿಳಾಸ, ರೆಫರೆನ್ಸ್ ನಂಬರ್, ಆಕ್ಷೇಪಣೆಯ ಸಂಕ್ಷಿಪ್ತ ವಿವರವನ್ನು ಆಕ್ಷೇಪಣೆಗೆ ಪೂರಕವಾದ ದಾಖಲೆಗಳೊಂದಿಗೆ ಲಿಖಿತ ರೂಪದಲ್ಲಿ "ಅಧ್ಯಕ್ಷರು ಗ್ರಾಮಲೆಕ್ಕಿಗರ ಆಯ್ಕೆ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಮಂಡ್ಯ ಇವರಿಗೆ ದಿನಾಂಕ: 08-08-2011 ರಿಂದ 22-08-2011ರ ಸಂಜೆ 5-30ರೊಳಗೆ ಖುದ್ದು ಅಥವಾ ಅಂಚೆ ಮೂಲಕ ಸಲ್ಲಿಸತಕ್ಕದ್ದು, ನಿಗಧಿತ ದಿನಾಂಕದ ನಂತರ ಬಂದ ಆಕ್ಷೇಪಣೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

ತಾತ್ಕಾಲಿಕ ಪರಿಶೀಲನಾ ಪಟ್ಟಿಯಂತೆ, ಅಭ್ಯರ್ಥಿಗಳು ಮೂಲ ದಾಖಲಾತಿಗಳ ಪರಿಶೀಲನೆಗಾಗಿ 1) ಮೂಲ ದಾಖಲೆಗಳು 2) ಅರ್ಜಿ ಶುಲ್ಕ ಪಾವತಿಸಿರುವ ಮೂಲ ಚಲನ್ 3) ಅಭ್ಯರ್ಥಿಯ ಮಾದರಿ ಸಹಿ ಮಾಡಿರುವ ಅಭ್ಯರ್ಥಿಯ ಭಾವಚಿತ್ರವಿರುವ ದೃಢೀಕೃತ ಗುರುತಿನ ಪತ್ರ ಹಾಗೂ ಇವುಗಳಿಗೆ ಪೂರಕವಾಗಿ ದೃಡೀಕೃತ ಪತ್ರಗಳ ದ್ವಿಪ್ರತಿ ಮತ್ತು 4) ಇತ್ತೀಚಿನ 2 ಭಾವಚಿತ್ರದೊಂದಿಗೆ SC, ST, 2A, 2B, 3A, 3B ವರ್ಗದ ಅಭ್ಯರ್ಥಿಗಳು ದಿನಾಂಕ:06-09-2011ರಂದು ಮತ್ತು ಸಾಮಾನ್ಯವರ್ಗ(GM) ಹಾಗೂ ಪ್ರವರ್ಗ-1 (Cat-1) ವರ್ಗದ ಅಭ್ಯರ್ಥಿಗಳು ದಿನಾಂಕ: 07-09-2011 ರಂದು ಬೆಳಿಗ್ಗೆ 10-00 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ ಇಲ್ಲಿ ಹಾಜರಾಗತಕ್ಕದ್ದು. ಈ ಸಂಬಂಧ ಅಭ್ಯರ್ಥಿಗಳಿಗೆ ಯಾವುದೇ ಪ್ರತ್ಯೇಕ ಸೂಚನಾ ಪತ್ರ ಕಳುಹಿಸಲಾಗುವುದಿಲ್ಲ. ತಾತ್ಕಾಲಿಕ ಪರಿಶೀಲನಾ ಪಟ್ಟಿಯ ಪರಿಶೀಲನೆಗೆ ನಿಗಧಿಪಡಿಸಿದ ದಿನಾಂಕದಂದು ಹಾಜರಾಗದ ಅಭ್ಯರ್ಥಿಗಳ ಅರ್ಜಿಯನ್ನು ಯಾವುದೇ ಮುನ್ಸೂಚನೆ ನೀಡದೇ ತಿರಸ್ಕರಿಸಲಾಗುವುದು.

ತಾತ್ಕಾಲಿಕ ಪರಿಶೀಲನಾ ಪಟ್ಟಿ ಪ್ರಕಟಿಸಿರುವ ಸಂಬಂಧ ಯಾವುದೇ ಪತ್ರ ವ್ಯವಹಾರಗಳಿಗೆ ಅವಕಾಶವಿರುವುದಿಲ್ಲ. ತಾತ್ಕಾಲಿಕ ಪರಿಶೀಲನಾ ಪಟ್ಟಿಯಂತೆ ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾದ ಅಭ್ಯರ್ಥಿಗಳನ್ನಾಧರಿಸಿ ಅಂತಿಮವಾಗಿ ದಿನಾಂಕ: 22-09-2011ರಂದು ಮೆರಿಟ್ ಆಧಾರದಲ್ಲಿ ಮೀಸಲಾತಿಗನುಗುಣವಾಗಿ ಅಂತಿಮ ಆಯ್ಕೆ ಪಟ್ಟಿಯನ್ನು ಹಾಗೂ ಕಾಯ್ದಿರಿಸಲಾದ ಅಭ್ಯರ್ಥಿಗಳ ಪಟ್ಟಿಯನ್ನು 1:1 ಅನುಪಾತದಲ್ಲಿ ಪ್ರಕಟಿಸಲಾಗುವುದು.

ಸಹಿ/-
ಅಧ್ಯಕ್ಷರು,
ಆಯ್ಕೆ ಮತ್ತು ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು,
ಮಂಡ್ಯ ಜಿಲ್ಲೆ, ಮಂಡ್ಯ.

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಸೇವೆಗಳು) ಬಹುಮಹಡಿಗಳ ಕಟ್ಟಡ ಬೆಂಗಳೂರು-1
2. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು
3. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು,
4. ಉಪವಿಭಾಗಾಧಿಕಾರಿಗಳು, ಮಂಡ್ಯ/ಪಾಂಡವಪುರ ಉಪವಿಭಾಗ
5. ಜಿಲ್ಲೆಯ ಎಲ್ಲಾ ತಹಸೀಲ್ದಾರ್/ಡಿ.ಐ.ಒ, ಎನ್.ಐ.ಸಿ ಮಂಡ್ಯ

ಅಪರ ಜಿಲ್ಲಾಧಿಕಾರಿ,
ಮಂಡ್ಯ ಜಿಲ್ಲೆ, ಮಂಡ್ಯ.